# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1096/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/10/2016

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ ಎಸ್.ಡಿ. ನಾಗತಾಣ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು, ಪ್ರಸ್ತುತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡರನಟ್ಟಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*-*-*

1. ದೂರುದಾರರಾದ ಶ್ರೀ ಜ್ಯೋತಿಬ ಮಾರುತಿ ಪಾಟಿಲ್ ರವರು ಈ ಸಂಸ್ಥೆಗೆ ದೂರೊಂದನ್ನು ನೀಡಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ವತಿಯಿಂದ ವಸತಿ ಯೋಜನೆಯಡಿಯಲ್ಲಿ ಸರಿಯಾದ ಫಲಾನುಭವಿಗಳನ್ನು ಆರಿಸಿರುವುದಿಲ್ಲ ಹಾಗೂ ನರೇಗಾ ಯೋಜನೆಯಡಿಯಲ್ಲಿ ಕೂಲಿ ಕಾರ್ಮಿಕರಿಗೆ ಸಂದಾಯವಾಗಬೇಕಿದ್ದ ಹಣವನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ವಸತಿ ಯೋಜನೆಯಡಿಯಲ್ಲಿ ಮನೆ ಕಟ್ಟದೇ ಇರುವವರಿಗೂ ಹಣವನ್ನು ಬಿಡುಗಡೆ ಮಾಡಿರುವುದಾಗಿ ತೋರಿಸಿರುತ್ತಾರೆ. ಮಾರನಹೋಳ ಗ್ರಾಮದ ಮರಾಠಿ ಶಾಲೆಯ ಆವರಣ ಗೋಡೆ ಕಟ್ಟುವ ಕಾಮಗಾರಿಯಲ್ಲಿ ಹಣವನ್ನು ಎದುರುದಾರರು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು, ಆದ್ದರಿಂದ, ಅವರ ಮೇಲೆ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರಾದ ಶ್ರೀ ಲಕ್ಷ್ಮಣ ಮಾರುತಿ ಮಣ್ಣಿಕೇರಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿಯ ಸದಸ್ಯರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯನ್ನು ಹಾಜರುಪಡಿಸಲಾಗಿದೆ. ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತನಗೆ ಒಂದೊಲ್ಲ ಒಂದು ರೀತಿಯಿಂದ ತೊಂದರೆ ಕೊಡುತ್ತಿದ್ದಾರೆ ಎಂದು ತಾನು ಸರ್ಕಾರದ ಹಣವನ್ನು ಯಾವುದೇ ರೀತಿ ದುರುಪಯೋಗ ಪಡಿಸಿಕೊಂಡಿಲ್ಲವೆಂದು, ತಾನು ಪ್ರಾಮಾಣಿಕ ಪಂಚಾಯತಿ ಸದಸ್ಯನಾಗಿ ಪಂಚಾಯತಿಯ ಕರ್ತವ್ಯ ನಿರ್ವಹಿಸಿರುತ್ತೇನೆಂದು, ದೂರುದಾರರು ಮಾಡಿರುವ ಆರೋಪಗಳು ಸುಳ್ಳೆಂದು ತಿಳಿಸಿರುತ್ತಾರೆ.

N. Anand

3. ಏತನ್ಮಧ್ಯೆ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಬೆಳಗಾವಿಯ ಆರಕ್ಷಕ ಉಪಾಧೀಕ್ಷಕರಿಗೆ ವಹಿಸಿ ತನಿಖಾ ವರದಿಯನ್ನು ನೀಡುವಂತೆ ಕೋರಲಾಗಿದ್ದು, ಅದರಂತೆ, ತನಿಖಾಧಿಕಾರಿಯವರು ತನಿಖೆಯನ್ನು ನಿರ್ವಹಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಹಾಜರುಪಡಿಸಲಾಗಿದೆ. ಸದರಿ ವರದಿಯಲ್ಲಿ ತನಿಖಾಧಿಕಾರಿಯವರು ದಿ:19/06/2015 ರಂದು ಶ್ರೀ ಎಸ್.ಸಿ.ಮಠಪತಿ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಹಾಗೂ ಶ್ರೀಮತಿ ಪೂನಂ ಗದಗೆ, ಪಿ.ಡಿ.ಒ, ಗ್ರಾಮ ಪಂಚಾಯತಿ, ಹೊಸ ವಂಟಮೂರಿ ಇವರೊಂದಿಗೆ ಬೆಳಗಾವಿ ತಾಲ್ಲೂಕಿನ ಮರಣಹೋಳ ಗ್ರಾಮದಲ್ಲಿರುವ ಸರ್ಕಾರಿ ಮರಾಠಿ ಶಾಲೆಗೆ ಭೇಟಿ ನೀಡಿ ಆವರಣ ಗೋಡೆ ಕಟ್ಟಿರುವ ಬಗ್ಗೆ ಪರಿಶೀಲಿಸಿದ್ದು, ಆವರಣ ಗೋಡೆಯನ್ನು 'ಎಲ್' ಮಾದರಿಯಲ್ಲಿ ಕಟ್ಟಲಾಗಿರುತ್ತದೆಂದು, ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಗೋಡೆಯನ್ನು 2010–11ನೇ ಸಾಲಿನಲ್ಲಿ ನರೇಗಾ ಯೋಜನೆಯಡಿಯಲ್ಲಿ ನಿರ್ಮಿಸಿದ್ದು, ಈ ಕಾಮಗಾರಿಗೆ ರೂ.5.00 ಲಕ್ಷದ ಅಂದಾಜು ಪಟ್ಟಿ ತಯಾರಿಸಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದುಕೊಂಡು, ದಿ:09/02/2011 ರಿಂದ ಕಾಮಗಾರಿಯನ್ನು ಪ್ರಾರಂಭಿಸಿ, ದಿ:22/12/2011 ರಂದು ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲಾಗಿದೆ. ಗ್ರಾಮ ಪಂಚಾಯತಿಯ ದಾಖಲಾತಿಗಳ ಪ್ರಕಾರ ಇದುವರೆಗೂ ನಿರ್ಮಿಸಿರುವ ಆವರಣ ಗೋಡೆಗೆ ರೂ.2,38,383/– ಅನ್ನು ಖರ್ಚು ಮಾಡಲಾಗಿರುತ್ತದೆ. ಕಾಮಗಾರಿಯನ್ನು ಯಾವ ಕಾರಣಕ್ಕಾಗಿ ಅರ್ಧಕ್ಕೆ ನಿಲ್ಲಿಸಲಾಗಿದೆ ಎಂಬ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಸದರಿ ಗೋಡೆಯನ್ನು ಹಾಜರಿದ್ದ ಸಹಾಯಕ ಅಭಿಯಂತರರು ಅಳತೆ ಮಾಡಿರುತ್ತಾರೆ ಹಾಗೂ ಸದರಿ ಅಳತೆಯನ್ನು ಎಂ.ಬಿ ಪುಸ್ತಕದಲ್ಲಿದಂತಹ ಅಳತೆಗೆ ಹೋಲಿಸಿ ಪರಿಶೀಲಿಸಿ ಅಳತೆ ಸರಿ ಇದೆ ಎಂದು ತಿಳಿಸಿರುತ್ತಾರೆ ಮತ್ತು ಸದರಿ ಶಾಲಾ ಆವರಣ ಗೋಡೆಯ ಫೋಟೋವನ್ನು ಹಾಜರುಪಡಿಸಿದ್ದು, ಅದನ್ನು ಹಾಜರುಪಡಿಸಲಾಗಿದೆ. ಮರಣಹೋಳ ಗ್ರಾಮದಲ್ಲಿ ಇಂದಿರಾ ಆವಾಜ್ ಹಾಗೂ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ಪೈಕಿ ಶ್ರೀಮತಿ ಸತ್ಯವ್ವ ಭರಮ ಪಾಟೀಲ್ ಇವರು 2010–11ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಕಟ್ಟಿದ್ದು, ಶ್ರೀಮತಿ ರತ್ನಬಾಯಿ ಭರಮ ಪಾಟೀಲ್ ಇವರಿಬ್ಬರ ಮನೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿದಾಗ, ಈ ಇಬ್ಬರ ಮನೆಯು ಒಂದೇ ಮನೆಯಾಗಿದ್ದು, ಶ್ರೀಮತಿ ಸತ್ಯವ್ವ ಭರಮ ಪಾಟೀಲ್ ಇವರು ಮನೆಯ ಮುಂದೆ ನಿಂತು ಫೋಟೋ ತೆಗೆಸಿದ್ದು ಶ್ರೀಮತಿ ರತ್ನಬಾಯಿ ಭರಮ ಪಾಟಿಲ್ ಇವರು ಮನೆಯ ಹಿಂದೆ ನಿಂತು ಫೋಟೋ ತೆಗೆಸಿಕೊಂಡಿರುತ್ತಾರೆ. ಸದರಿಯವರುಗಳ ಮನೆಗೆ ಸಂಬಂಧಿಸಿದಂತೆ ಪ್ರತಿ ಹಂತದ ಮನೆ ಕಟ್ಟಡದ ನಿರ್ಮಾಣದ ನಂತರ ಫೋಟೋವನ್ನು ತೆಗೆದು ಕಡತಕ್ಕೆ ಅಳವಡಿಸಿರುವುದಿಲ್ಲ. ಶ್ರೀಮತಿ ಸತ್ಯವ್ವ ಇವರಿಗೆ ರೂ.50,000/– ವನ್ನು ಮತ್ತು ಶ್ರೀಮತಿ ರತ್ನವ್ವ ಇವರಿಗೆ ರೂ.74,500/– ನೀಡಿರುವುದಾಗಿ ಅವರ ಕಡತದಲ್ಲಿ ನಮೂದಿಸಲಾಗಿರುತ್ತದೆ. ಶ್ರೀಮತಿ ಸತ್ಯವ್ವ ಭರಮ ಪಾಟೀಲ್ ಇವರಿಗೆ

ಸಂಬಂಧಿಸಿದ ಕಡತವನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ರತ್ನಮ್ಮ ಭರಮ ಪಾಟೀಲ್ ಇವರಿಗೆ ಸಂಬಂಧಿಸಿದ ವಸತಿ ಯೋಜನೆಯ ಕಡತವನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ರತ್ನಬಾಯಿ ಮತ್ತು ಶ್ರೀಮತಿ ಸತ್ಯವ್ವ ಇವರುಗಳ ಮನೆಯ ಫೋಟೋವನ್ನು ಹಾಜರುಪಡಿಸಲಾಗಿದೆ. 2010-11ನೇಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿನ ಫಲಾನುಭವಿಯಾದ ಶ್ರೀಮತಿ ಲಕ್ಷ್ಮೀಬಾಯಿ ಸೋನರ ವಾಡಿಕರ್ ನ ದಾಖಲೆಗಳನ್ನು ಹಾಗೂ ಮನೆಯ ಸ್ಥಳ ಪರಿಶೀಲನೆ ಹಾಗೂ ಫೋಟೋದಲ್ಲಿರುವ ಮನೆಯು ಒಂದೇ ಆಗಿರುತ್ತದೆ. ಆದರೆ, ಜಿ.ಪಿ.ಎಸ್ ನಲ್ಲಿ ಅಳವಡಿಸಿರುವ ಫೋಟೋ, ಮೇಲೆ ಹೇಳಿದ ಫೋಟೋಗಳಿಗೆ ತಾಳೆಯಾಗಿರುವುದಿಲ್ಲ ಹಾಗೂ ಸದರಿಯವರು ಮನೆಯನ್ನು ಕಟ್ಟುವ ಪ್ರತಿಯೊಂದು ಕಾಮಗಾರಿಯ ಹಂತದ ಫೋಟೋವನ್ನು ವಸತಿ ಯೋಜನೆಯಡಿಯಲ್ಲಿ ನೀಡಿರುವ ಮಾರ್ಗಸೂಚಿಯಂತೆ ತೆಗೆದು ಕಡತಕ್ಕೆ ಅಳವಡಿಸಿರುವುದಿಲ್ಲ. ಸದರಿ ಫಲಾನುಭವಿಗೆ ರೂ.74,500/- ಅನ್ನು ನೀಡಲಾಗಿರುತ್ತದೆ. ಶ್ರೀಮತಿ ಲಕ್ಷ್ಮೀಬಾಯಿ ಸೋನರ್ ವಾಡಿಕರ್ ಇವರ ಮನೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲಾಗಿದೆ. ಸದರಿಯವರ ಮನೆಯ ಫೋಟೋವನ್ನು ಹಾಜರುಪಡಿಸಲಾಗಿದೆ.

4. 2011-12ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿಯಲ್ಲಿನ ಫಲಾನುಭವಿಯಾದ ಶ್ರೀಮತಿ ಪಾರ್ವತಿ ದೇಮಣ್ಣ ಪಾಟೀಲ್ ಇವರ ಮನೆಯನ್ನು ಹಾಗೂ ಜಿ.ಪಿ.ಎಸ್ ನಲ್ಲಿ ಅಳವಡಿಸಲಾಗಿರುವ ಫೋಟೋಗಳನ್ನು ಪರಿಶೀಲಿಸಿದ್ದು, ಸ್ಥಳ ಪರಿಶೀಲನೆ ಕಾಲದಲ್ಲಿ ಕಂಡು ಬಂದ ಮನೆಯು ಜಿ.ಪಿ.ಎಸ್. ನಲ್ಲಿ ಅಳವಡಿಸಲಾಗಿರುವ ಫೋಟೋಗಳಿಗೆ ತಾಳೆಯಾಗಿರುವುದಿಲ್ಲ. ಮನೆ ಮುಂದೆ ತೆಗೆಯಲಾದ ಫೋಟೋವನ್ನು ಹಾಜರುಪಡಿಸಲಾಗಿದೆ. ಇದಲ್ಲದೇ, ಕಡತದಲ್ಲಿ ಸದರಿಯವರಿಗೆ ಸಂಬಂಧಿಸಿದ ಮನೆಯ ಕಟ್ಟುವ ಕಾಮಗಾರಿಯ ಪ್ರತಿಯೊಂದು ಹಂತದ ಫೋಟೋವನ್ನು ತೆಗೆದು ಕಡತದಲ್ಲಿ ಅಳವಡಿಸಿರುವುದಿಲ್ಲ. ಇವರಿಗೆ ರೂ.74,500/- ಅನ್ನು ಬಿಡುಗಡೆ ಮಾಡಲಾಗಿರುತ್ತದೆ. ಇವರು ಸ್ಥಿತಿವಂತರಾಗಿರುವುದು ಕಂಡು ಬಂದಿರುತ್ತದೆಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಫಲಾನುಭವಿಯ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ. 2010-11ನೇ ಸಾಲಿನ ವಸತಿ ಯೋಜನೆಯಡಿಯಲ್ಲಿ ಶ್ರೀಮತಿ ರಂಜನಾ ಲಕ್ಷ್ಮಣ ಪಾಟೀಲ್ ಇವರಿಗೆ ಮನೆಯನ್ನು ಮಂಜೂರು ಮಾಡಲಾಗಿದ್ದು, ಸ್ಥಳ ಪರಿಶೀಲನೆ ಕಾಲದಲ್ಲಿ ಕಂಡು ಬಂದ ಮನೆಗೂ, ಫೈಲ್‌ನಲ್ಲಿ ಇದ್ದಂತಹ ಫೋಟೋ ಮತ್ತು ಜಿ.ಪಿ.ಎಸ್ ನಲ್ಲಿ ಅಳವಡಿಸಲಾಗಿರುವ ಫೋಟೋಗಳಿಗೂ ತಾಳೆಯಾಗಿರುತ್ತದೆಂದು, ಆದರೆ, ಈ ಫಲಾನುಭವಿಯ ಮನೆಗೆ ಸಂಬಂಧಿಸಿದ ಕಡತದಲ್ಲಿ ಸದರಿ ಮನೆಯ ಕಾಮಗಾರಿಯ ಪ್ರತಿಯೊಂದು ಹಂತದ ಫೋಟೋ ಅಳವಡಿಸಿರುವುದಿಲ್ಲ. ಸದರಿ ಫಲಾನುಭವಿಯ ಮನೆಗೆ ಸಂಬಂಧಿಸಿದ ಕಡತವನ್ನು ಹಾಜರುಪಡಿಸಲಾಗಿದೆ.

5. 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿನ ಫಲಾನುಭವಿಯಾದ ಶ್ರೀಮತಿ ಕರೆವ್ವ ಲಕ್ಷ್ಮಮ ಎಮ್ಮೇಟಕರ್ ಇವರಿಗೆ ಮಂಜೂರಾದ ಮನೆಯ ಸ್ಥಳವನ್ನು ಹಾಗೂ

ಸಂಬಂಧಪಟ್ಟ ದಾಖಲೆಯನ್ನು ತನಿಖಾಧಿಕಾರಿಗಳು ಪರಿಶೀಲಿಸಿದ್ದು, ಸ್ಥಳ ಪರಿಶೀಲನೆ ಕಾಲದಲ್ಲಿ ಕಂಡು ಬಂದಂತಹ ಮನೆಗೆ ಹಾಗೂ ದಾಖಲೆಯಲ್ಲಿ ಅಳವಡಿಸಿರುವ ಪೋಟೋಗಳಿಗೂ ಹೊಂದಾಣಿಕೆಯಾಗಿರುವುದಿಲ್ಲ ಹಾಗೂ ಈ ಫಲಾನುಭವಿಯ ಹೆಸರಿನಲ್ಲಿ ಆಸ್ತಿ ಇರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಫಲಾನುಭವಿಯವರು ತೆಗೆಸಿರುವ ಮನೆಯು ಶ್ರೀ ಚಂದ್ರಕಾಂತ್ ಶಿವಾಜಿ ಎಂಬುವವರದ್ದಾಗಿರುತ್ತದೆ, ಇವರಿಗೆ ರೂ.74,500/- ಅನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಫಲಾನುಭವಿಗೆ ಸಂಬಂಧಿಸಿದ ಮನೆಯ ದಾಖಲೆಗಳನ್ನು ಹಾಜರುಪಡಿಸಲಾಗಿದೆ.

6. 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಶ್ರೀಮತಿ ತುಳಸ ಬಾಯಿ ಸಕರಾಮ ಎಣ್ಣೇಚೌಡಿ ಇವರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಲಾಗಿದ್ದು, ಇವರಿಗೆ ಸಂಬಂಧಿಸಿದ ಮನೆಯನ್ನು ಹಾಗೂ ಮನೆಯ ಕಡತಗಳನ್ನು ಪರಿಶೀಲಿಸಿದ್ದು, ಜಿ.ಪಿ.ಎಸ್ ನಲ್ಲಿನ ಪೋಟೋ ಹಾಗೂ ಸ್ಥಳದಲ್ಲಿ ಇದ್ದ ಮನೆಯು ತಾಳೆಯಾಗಿರುತ್ತದೆ. ಆದರೆ, ಮನೆ ಕಟ್ಟುವ ಕಾಮಗಾರಿಯ ಪ್ರತಿಯೊಂದು ಹಂತದ ಪೋಟೋಗಳನ್ನು ಲಗತ್ತಿಸಿರುವುದಿಲ್ಲ. ಶ್ರೀಮತಿ ಸೋನುಬಾಯಿ ಪರಸು ಮಣ್ಣೀಕೇರಿ ಇವರಿಗೆ 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿ ಮನೆ ಮಂಜೂರಾಗಿದ್ದು, ಇವರ ಸ್ಥಳ ಪರಿಶೀಲನೆ ಹಾಗೂ ದಾಖಲೆಯನ್ನು ಪರಿಶೀಲಿಸಲಾಗಿ, ಇವರ ಮೆನ ಪ್ಲಿಂತ್ ಹಂತದವರೆಗೆ ಮಾತ್ರ ಕಟ್ಟಲಾಗಿದ್ದು, ಆದರೆ, ಪಂಚಾಯತಿ ಜಿ.ಪಿ.ಎಸ್. ನಲ್ಲಿ ಮನೆ ಮುಕ್ತಾಯವಾದ ಬಗ್ಗೆ ಪೋಟೋ ಅಳವಡಿಸಲಾಗಿರುತ್ತದೆ. ಜಿಪಿಎಸ್ ನಲ್ಲಿ ಬೇರೆ ಮನೆ ತೋರಿಸಿದ್ದು ಸ್ಪಷ್ಟವಾಗಿ ಕಂಡು ಬರುತ್ತದೆ. ಇವರಿಗೆ ರೂ.14,500/- ಅನ್ನು ಬಿಡುಗಡೆ ಮಾಡಿರುತ್ತಾರೆ. ಸದರಿ ಫಲಾನುಭವಿಯ ಮನೆಗೆ ಸಂಬಂಧಿಸಿದ ಕಡತವನ್ನು ಹಾಜರುಪಡಿಸಲಾಗಿದೆ. ಇವರ ಮನೆಯ ಪೋಟೋವನ್ನು ಹಾಜರುಪಡಿಸಲಾಗಿದೆ. 2010-11ನೇ ಸಾಲಿನ ಬಸವವಸತಿ ಯೋಜನೆಯಡಿಯಲ್ಲಿ ಶ್ರೀಮತಿ ಲಕ್ಷ್ಮೀ ನಾಗೋಜಿ ಘಾವಡೆ ಇವರನ್ನು ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯೆಂದು ಪರಿಗಣಿಸಲಾಗಿದ್ದು, ಇವರಿಗೆ ಮನೆಯನ್ನು ಮಂಜೂರು ಮಾಡಲಾಗಿರುತ್ತದೆ ಹಾಗೂ ರೂ.54,500/- ಅನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ, ಜಿ.ಪಿ.ಎಸ್., ಅನ್ನು ಪರಿಶೀಲಿಸಲಾಗಿ, ಕಾಮಗಾರಿಯ ಪ್ರತಿಯೊಂದು ಹಂತದ ಪೋಟೋವನ್ನು ಅಳವಡಿಸಿರುವುದಿಲ್ಲ. ಆದರೆ, ಮನೆಯ ಫೋಟೋವನ್ನು ಮಾತ್ರ ದಾಖಲೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸದರಿ ಫಲಾನುಭವಿಯವರು ತಾವು ಮುಂಚೆ ಇದ್ದ ಮನೆಯನ್ನೇ ಬೆಳೆಸಿ ಮುಂದೆ ಮನೆಯನ್ನು ಕಟ್ಟಿರುವುದಾಗಿ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿ ಫಲಾನುಭವಿಯ ಮನೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲಾಗಿದೆ. ಮನೆಯ ಪೋಟೋವನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಮುಕ್ತಾಬಾಯಿ ಭರಮ ಪಾಟಿಲ್ ಇವರನ್ನು 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿದ್ದು, ಇವರ ಮನೆಗೆ ಸಂಬಂಧಿಸಿದ ದಾಖಲೆಗಳಲ್ಲಿ ಪ್ಲಿಂತ್

ಹಂತದವರೆಗಿನ ಮನೆಯ ಪೋಟೋ ಮಾತ್ರ ಇರುತ್ತದೆ. ಆದರೆ, ಜಿ.ಪಿ.ಎಸ್ ನಲ್ಲಿ ಅಳವಡಿಸಿರುವ ಪೋಟೋ ಬೇರೆ ಮನೆಯದ್ದಾಗಿರುತ್ತದೆ. ಇವರಿಗೆ ರೂ.54,500/- ಅನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಫಲಾನುಭವಿಯ ಮನೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಲಾಗಿದೆ ಹಾಗೂ ಅವರ ಮನೆಯ ಪೋಟೋವನ್ನು ಹಾಜರುಪಡಿಸಲಾಗಿದೆ.

7. ತನಿಖಾಧಿಕಾರಿಯವರು ಮರಣಹೋಳ ಗ್ರಾಮದ ಸರ್ಕಾರಿ ಮರಾಠ ಶಾಲೆಯ ಆವರಣ ಗೋಡೆಯನ್ನು ನರೇಗಾ ಯೋಜನೆಯಡಿಯಲ್ಲಿ ಕಟ್ಟಿಸಿರುವುದಾಗಿದ್ದು, ಈ ಸಂಬಂಧ ತನಿಖಾಧಿಕಾರಿಯವರು ಕೂಲಿ ಕಾರ್ಮಿಕರನ್ನು ವಿಚಾರಣೆ ಮಾಡಿದ್ದು, ಸದರಿಯವರುಗಳು ಆವರಣ ಗೋಡೆ ಕಟ್ಟುವ ಕಾಮಗಾರಿಯಲ್ಲಿ ಕೆಲಸ ಮಾಡಿರುವುದಾಗಿ ಹಾಗೂ ತಮಗೆ ಕೂಲಿ ಹಣ ಸಂದಾಯವಾಗಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಈ ಹಂತದಲ್ಲಿ ಪ್ರಕರಣದ ದೂರುದಾರರಿಗೆ ಸುಳ್ಳು ಸಹಿ ಮಾಡಿರುವ ಫಲಾನುಭವಿಗಳ ಬಗ್ಗೆ ಮಾಹಿತಿ ನೀಡಲು ಕೋರಲಾಗಿದ್ದು, ಸದರಿಯವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಗ್ರಾಮ ಪಂಚಾಯತಿಯ ಸದಸ್ಯರಾದ ಶ್ರೀ ಲಕ್ಷ್ಮಣ ಮಾರುತಿ ಮಣ್ಣೀಕೇರಿ ಇವರು ಮರಣಹೋಳ ಗ್ರಾಮದ ಸರ್ವೇ ನಂ.25/1 ರ ಜಮೀನನ್ನು ಖರೀದಿಸಿರುತ್ತಾರೆಂಬ ಆರೋಪಣೆ ಬಗ್ಗೆ ಪರಿಶೀಲಿಸಿದ್ದು, ಇವರು ಭ್ರಷ್ಟಾಚಾರದಿಂದ ಸದರಿ ಆಸ್ತಿಯನ್ನು ಗಳಿಸಿರುವ ಬಗ್ಗೆ ಸಾಕ್ಷ್ಯಾಧಾರಗಳು ಲಭ್ಯವಾಗಿರುವುದಿಲ್ಲವೆಂದು ಹಾಗೂ ಸದರಿಯವರು ಈಗ ಗ್ರಾಮ ಪಂಚಾಯತಿಯ ಸದಸ್ಯರಾಗಿರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

8. ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ನರೇಗಾ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅಗತ್ಯ ವಿವರಗಳನ್ನು ಭರ್ತಿ ಮಾಡಿ, ಸಾಮಗ್ರಿ ಖರೀದಿ ಬಿಲ್ಲುಗಳನ್ನು ಪಾವತಿ ಪೂರ್ವ ಪರಿಶೀಲನೆಗೆ ಒಳಪಡಿಸುವ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ಹಾಜರುಪಡಿಸಲಾಗಿದೆ. ಸದರಿ ನಮೂನೆಯಲ್ಲಿ ಮಾಹಿತಿಯನ್ನು ಸಂಪೂರ್ಣವಾಗಿ ತುಂಬಿರುವುದಿಲ್ಲ, ಕೇವಲ ಕಾಮಗಾರಿಯ ಹೆಸರನ್ನು ಎನ್.ಎಂ.ಆರ್ ಗಳ ನಂಬರ್‌ಗಳನ್ನು ಮತ್ತು ಹಣದ ಮೊತ್ತವನ್ನು ಮಾತ್ರ ನಮೂದು ಮಾಡಲಾಗಿರುತ್ತದೆ. ಖರೀದಿ ಬಿಲ್ಲುಗಳ ನಮೂದಾಗಲಿ, ಭರಿಸಲಾದ ವೆಚ್ಚದ ಮೊತ್ತವನ್ನಾಗಲೀ ಮಾರಾಟ ತೆರಿಗೆ ಸಂದಾಯ ಮಾಡಿರುವ ವಿವರಗಳನ್ನಾಗಲೀ ನಮೂದಿಸಿರುವುದಿಲ್ಲ. ದಿ:16/02/2011 ರಿಂದ ದಿ:22/02/2011 ರವರೆಗಿನ ಎನ್.ಎಂ.ಆರ್., ನಲ್ಲಿ ಫಲಾನುಭವಿಗಳ ಹೆಸರನ್ನು ಹೆಬ್ಬೆಟಿನ ಗುರುತಿನಡಿ ನಮೂದಿಸಿರುವುದಿಲ್ಲ. ಸದರಿ ಎನ್.ಎಂ.ಆರ್ ಅನ್ನು ಹಾಜರುಪಡಿಸಲಾಗಿದೆ. ಈ ಮೇಲೆ ಹೇಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಗ್ರಾಮ ಪಂಚಾಯತಿಯ ಪಿಡಿಒ ಅಥವಾ ಕಾರ್ಯದರ್ಶಿಯನ್ನಾಗಲೀ ಪ್ರಕರಣದಲ್ಲಿ ಎದುರುದಾರರೆಂದು ಪ್ರಕರಣದಲ್ಲಿ ಅಳವಡಿಸದೆ ಇರುವ ಹಿನ್ನೆಲೆಯಲ್ಲಿ, 2010 ರಿಂದ 2012 ನೇ ಸಾಲಿನವರೆಗೂ ಇದ್ದಂತಹ ಪಿಡಿಒ ಹಾಗೂ

ಕಾರ್ಯದರ್ಶಿಯವರ ವಿಳಾಸವನ್ನು ಪಡೆಯಲು ಹಾಗೂ ಸದರಿ ಪಿಡಿಒ ಹಾಗೂ ಕಾರ್ಯದರ್ಶಿಯವರನ್ನು ಎದುರುದಾರರೆಂದು ಇಂಪ್ಲೀಡ್ ಮಾಡಿದ ನಂತರ, ಅವರುಗಳಿಗೆ ತನಿಖಾಧಿಕಾರಿಯವರ ವರದಿಯ ಪ್ರತಿಯನ್ನು ಕಳುಹಿಸಿ, ಅವರ ಆಕ್ಷೇಪಣೆಯನ್ನು ಪಡೆಯಲು ಕ್ರಮ ಜರುಗಿಸಲಾಗಿದ್ದು, ಅದರಂತೆ, 2012 ಮತ್ತು 2013ನೇ ಸಾಲಿನಲ್ಲಿ ಇದ್ದಂತಹ ಹೆಸರುಗಳನ್ನು ಹಾಗೂ ವಿಳಾಸವನ್ನು ಈಗಿನ ಪಿಡಿಒ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ರವರು ನೀಡಿದ್ದು, ಅದರಂತೆ ಅವರುಗಳನ್ನು ಎದುರುದಾರರೆಂದು ಇಂಪ್ಲೀಡ್ ಮಾಡಿ, ಅವರುಗಳಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿ (2) ರಿಂದ (5) ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅದರಲ್ಲಿ 3ನೇ ಎದುರುದಾರರಾದ ಶ್ರೀ ಕೃಷ್ಣಾನಂದ ಮಾನೆ ಇವರು ದಿ: 30/04/2013 ರಂದು ವಯೋನಿವೃತ್ತಿ ಹೊಂದಿರುತ್ತೇನೆಂದು ನರೇಗಾ ಯೋಜನೆಯಡಿಯಲ್ಲಿ ಮರಣಹೋಳ ಗ್ರಾಮದ ಶಾಲೆಯ ಆವರಣ ಗೋಡೆ ಕಟ್ಟಿಸುವ ನಿಟ್ಟಿನಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸದರಿ ಕಾಮಗಾರಿಗೆ ಪಡೆದು, ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ತನ್ನ ಅವಧಿಯಲ್ಲಿ ಅಳತೆ ಮಾಡಿದ ಕಾಮಗಾರಿಗೆ ಮಾತ್ರ ಹಣವನ್ನು ಅಂದರೆ ರೂ.2,38,383/- ಅನ್ನು ವಿನಿಯೋಗಿಸಲಾಗಿದೆ ಎಂದು ತಿಳಿಸಿರುತ್ತಾರೆ. ಅದೇ ರೀತಿ 2010-11 ನೇ ಸಾಲಿನ ವಸತಿ ಯೋಜನೆಯಡಿಯಲ್ಲಿ ಮಾರ್ಗಸೂಚಿಗಳನ್ನು ಪರಿಪಾಲಿಸಿ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ಆದ್ದರಿಂದ, ದೂರುದಾರರು ಮಾಡಿರುವ ದೂರು ಸತ್ಯವಲ್ಲವೆಂದು ತಿಳಿಸಿರುತ್ತಾರೆ. 4ನೇ ಎದುರುದಾರರಾದ ಶ್ರೀ ಅರುಣ್ ಸಿ ಕುಲ್ಕರ್ಣಿ ಇವರು ಈಗ ನಿವೃತ್ತಿಯಾಗಿದ್ದು, ಇವರು ಸಹ ತಮ್ಮ ಆಕ್ಷೇಪಣೆಯಲ್ಲಿ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವಸತಿ ಯೋಜನೆಯ ಮಾರ್ಗಸೂಚಿಗಳನ್ನು ಅನುಸರಿಸಿ ಹಣವನ್ನು ಬಿಡುಗಡೆ ಮಾಡಿದ್ದು ಅದರಂತೆ ಅವರು ಮನೆಯನ್ನು ಕಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಈ ಕಾಮಗಾರಿಗಳಲ್ಲಿ ಯಾವುದೇ ಅವ್ಯವಹಾರವಾಗಿಲ್ಲವೆಂದು ತಿಳಿಸಿರುತ್ತಾರೆ.

9. 5ನೇ ಎದುರುದಾರರಾದ ಶ್ರೀ ಎಸ್.ಡಿ. ನಾಗತಾಣ ಇವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದು ಇವರು ಸಹ 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಅನುಸರಿಸಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 2ನೇ ಎದುರುದಾರರು 2011-12ನೇ ಸಾಲಿನಲ್ಲಿ ಹೊಸ ವಂಟಮೂರಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುವುದಿಲ್ಲ. ಇವರು ಹಾಲಿ ಹೊಸ ವಂಟಮೂರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿದ್ದು, ಮೇಲಿನ ಕಾಮಗಾರಿಗಳಿಗೆ ಇವರು ಜವಾಬ್ದಾರರಾಗಿರುವುದಿಲ್ಲವೆಂದು ಕಂಡು ಬಂದಿರುತ್ತದೆ.

10. ಮೇಲೆ ಹೇಳಿದಂತೆ ಮರಣಹೋಳ ಸರ್ಕಾರಿ ಮರಾಠಿ ಶಾಲೆಯ ಆವರಣ ಗೋಡೆಯನ್ನು ಅರ್ಧಕ್ಕೆ ಕಟ್ಟಿಸಿ ನಿಲ್ಲಿಸಲಾಗಿರುತ್ತದೆ. ಇದಕ್ಕೆ ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ. ಅಪೂರ್ಣವಾದ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ಯಾವುದೇ ಕಾರಣವಿಲ್ಲದ ಹಿನ್ನೆಲೆಯಲ್ಲಿ

ಹಣವನ್ನು ಬಿಡುಗಡೆ ಮಾಡಿರುವುದು ಸಹ ಎದುರುದಾರರ ಸಂಬಂಧಪಟ್ಟ ಪಿಡಿಒ ಅವರ ಕರ್ತವ್ಯಲೋಪವನ್ನು ತೋರಿಸುತ್ತದೆ. ಇದಲ್ಲದೇ, ವಸತಿ ಯೋಜನೆಯಡಿಯಲ್ಲಿ ಮೇಲೆ ಹೇಳಿದಂತೆ ಫಲಾನುಭವಿಗಳು ಮನೆಯನ್ನು ಕಟ್ಟದೇ ಇದ್ದರೂ ಹಾಗೂ ಮನೆ ಕಟ್ಟಲು ಅವರದೇ ಆದ ಸ್ವಂತ ನಿವೇಶನ ಇಲ್ಲದಿದ್ದರೂ ಬೇರೆಯವರು ಕಟ್ಟಿದ ಮನೆಯ ಮುಂದೆ ಫೋಟೋ ತೆಗೆಸಿ, ಸದರಿ ಫಲಾನುಭವಿ ಮನೆ ಕಟ್ಟಿರುವರೆಂದು ತೋರಿಸಿ ಹಣವನ್ನು ಬಿಡುಗಡೆ ಮಾಡಿರುವುದರಿಂದ ಸಂಬಂಧಪಟ್ಟ ಪಿಡಿಒ ರವರು ಕರ್ತವ್ಯಲೋಪವೆಸಗಿ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು ಸ್ಪಷ್ಟ ಪಡುತ್ತದೆ. ಈ ಸಂಬಂಧ ಸದರಿ ಕರ್ತವ್ಯ ಲೋಪಕ್ಕೆ ಹೊಸ ವಂಟಮೂರಿ ಗ್ರಾಮ ಪಂಚಾಯತಿ ಹಿಂದಿನ ಕಾರ್ಯದರ್ಶಿ ಶ್ರೀ ಕೃಷ್ಣಾನಂದ ಮಾನೆ ರವರು ಹಾಗೆ ಹಿಂದಿನ ಹೊಸ ವಂಟಮೂರಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಶ್ರೀ ಎ.ಸಿ. ಕುಲ್ಕರ್ಣಿ ಹಾಗೂ ಶ್ರೀ ಎಸ್.ಡಿ. ನಾಗತಾಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರುಗಳು ಜವಾಬ್ದಾರರಾಗಿರುತ್ತಾರೆ. ಇದರಲ್ಲಿ ಶ್ರೀ ಕೃಷ್ಣಾನಂದ ಮಾನೆ ಹಾಗೂ ಶ್ರೀ ಎ.ಸಿ. ಕುಲ್ಕರ್ಣಿ ರವರು ಈಗಾಗಲೇ ನಿವೃತ್ತಿ ಹೊಂದಿರುವುದಾಗಿ ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದ್ದು, ಸದರಿ ಮಾಹಿತಿಯ ಬಗ್ಗೆ ಸ್ಪಷ್ಟೀಕರಣ ಕೇಳಿ ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಕಚೇರಿಯಿಂದ ಮಾಹಿತಿಯನ್ನು ಕೋರಿದ್ದು ದಿ: 24/10/2016 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬೆಳಗಾವಿ ಇವರು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಈ ಕಚೇರಿಗೆ ಕಳುಹಿಸಿದ್ದು, ಸದರಿ ಪತ್ರದಲ್ಲಿ ಶ್ರೀ ಕೆ.ಎ.ಮಾನೆ ರವರು ದಿ: 30/4/2013 ರಂದು ನಿವೃತ್ತಿ ಹೊಂದಿರುತ್ತಾರೆಂದು ಶ್ರೀ ಎ.ಸಿ.ಕುಲಕರ್ಣಿ ಇವರು ದಿ: 31/07/2015 ರಂದು ನಿವೃತ್ತಿ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ ಹಾಗೂ ಪ್ರಕರಣದ ಕಾಮಗಾರಿ 2010–11ನೇ ಸಾಲಿಗೆ ಸಂಬಂಧಿಸಿದ್ದಾಗಿರುವುದರಿಂದ, ಇವರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರಡಿ ವರದಿಯನ್ನು ಸಲ್ಲಿಸಲು ಸಾಧ್ಯವಿರುವುದಿಲ್ಲ. 1ನೇ ಎದುರುದಾರರು ಈಗ ಸದರಿ ಹೊಸ ವಂಟಮೂರಿ ಗ್ರಾಮ ಪಂಚಾಯತಿ ಸದಸ್ಯರಲ್ಲದೇ ಇರುವುದರಿಂದ ಅವರ ವಿರುದ್ಧ ಭ್ರಷ್ಟಾಚಾರ ಆರೋಪ ಸಾಬೀತಾಗದೆ ಇರುವುದರಿಂದ, ಅವರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ. ಆದರೆ, 5ನೇ ಎದುರುದಾರರಾದ ಶ್ರೀ ನಾಗತಾಣ ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಸದ್ಯದಲ್ಲಿ ಸೇವೆಯಲ್ಲಿರುತ್ತಾರೆ. ಈ ಪ್ರಕರಣದಲ್ಲಿ ಮೇಲೆ ಹೇಳಿದ ಸರ್ಕಾರಿ/ಸಾರ್ವಜನಿಕ ನೌಕರರು ಅಪೂರ್ಣವಾದ ಕಾಮಗಾರಿಗೆ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಮನೆ ಕಟ್ಟಿಲ್ಲದ ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಸ್ವಂತ ನಿವೇಶನವಿಲ್ಲದವರಿಗೂ ಸಹ ಹಣವನ್ನು ಬಿಡುಗಡೆ ಮಾಡಿರುತ್ತಾರೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದ್ದು, ಈ ಬಗ್ಗೆ ಸದರಿ ಹಣವನ್ನು ಮೇಲೆ ಹೇಳಿದ (1) ಶ್ರೀ ಕ್ರಷ್ಣಾನಂದ ಮಾನೆ, ಹಿಂದಿನ ಕಾರ್ಯದರ್ಶಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ (2) ಶ್ರೀ ಎ.ಸಿ.

ಕುಲ್ಕರ್ಣಿ, ಹಿಂದಿನ ಕಾರ್ಯದರ್ಶಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ಹಾಗೂ (3) ಶ್ರೀ ಎಸ್.ಡಿ. ನಾಗಠಾಣ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ಇವರುಗಳಿಂದ ವಸೂಲು ಮಾಡಬೇಕಾಗಿರುತ್ತದೆ.

11. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **ಎದುರುದಾರರಾದ ಶ್ರೀ ಎಸ್.ಡಿ. ನಾಗಠಾಣ, ಹಿಂದಿನ ಪಂಚಾಯತಿ ಅಭಿವೃದ್ದಿ ಅಧಿಕಾರಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು, ಪ್ರಸ್ತುತ ಪಂಚಾಯತಿ ಅಭಿವೃದ್ದಿ ಅಧಿಕಾರಿ, ಡರನಟ್ಟಿ ಗ್ರಾಮ ಪಂಚಾಯತಿ, ಬೆಳಗಾವಿ ತಾಲ್ಲೂಕು ಮತ್ತು** ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ. ಹಾಗೆಯೇ (1) ಶ್ರೀ ಕ್ರಷ್ಣಾನಂದ ಮಾನೆ, ಹಿಂದಿನ ಕಾರ್ಯದರ್ಶಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ (2) ಶ್ರೀ ಎ.ಸಿ. ಕುಲ್ಕರ್ಣಿ, ಹಿಂದಿನ ಕಾರ್ಯದರ್ಶಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ಹಾಗೂ (3) ಶ್ರೀ ಎಸ್.ಡಿ. ನಾಗಠಾಣ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಸ ವಂಟಮೂರಿ ಗ್ರಾಮ ಪಂಚಾಯತಿ ಇವರುಗಳಿಂದ ಮೇಲೆ ತಿಳಿಸಿರುವಂತೆ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟಕ್ಕಾಗಿ ಹಣವನ್ನು ವಸೂಲು ಮಾಡಲು ಸೂಕ್ತ ಕ್ರಮ ಜರುಗಿಸುವಂತೆ ಸಹ ಶಿಫಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 26/10

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

25/10/16